**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ ಅವಿನಾಶ್** | **ಸಿ.ಡಬ್ಲ್ಯೂಃ 4** |
| **ತಂದೆಯ ಹೆಸರು** | **ಃ ಯೋಗಪ್ಪಗೌಡ** | **ಪಿ.ಡಬ್ಲೂಃ 4** |
| **ವಯಸ್ಸು** | **ಃ 34** | |
| **ಉದ್ಯೋಗ** | **ಃ ಕೃಷಿ** | |
| **ವಾಸಸ್ಥಳ** | **ಃ ಕೊಡೂರು, ಶೃಂಗೇರಿ ತಾಲ್ಲೂಕು** | |

**ದಿನಾಂಕಃ 07.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಮತ್ತು ಚಾಸಾ-1 ರವರು ದಿನಾಂಕಃ 05.12.2024 ರಂದು ವೈಯಕ್ತಿಕ ಕೆಲಸದ ನಿಮಿತ್ತ ಚಿಕ್ಕಮಗಳೂರಿಗೆ ಹೋಗಿದ್ದೆವು. ನಾವು ಅದೇ ದಿನ ಸಂಜೆ ಚಿಕ್ಕಮಗಳೂರಿನಿಂದ ವಾಪಸ್ಸು ಶೃಂಗೇರಿಗೆ ಬರುತ್ತಿರುವಾಗ್ಗೆ ಬಾಳೆಹೊನ್ನೂರಿನ ಬಳಿ ಚಾಸಾ-5/ದೀಕ್ಷಿತ್ ರವರು ತಾನು ಸಹ ಬಾಳೆಹೊನ್ನೂರಿಗೆ ಬರುತ್ತಿರುವುದಾಗಿ ತಿಳಿಸಿದರು. ನಾವು ಬಾಳೆಹೊನ್ನೂರು ಸರ್ಕಲ್ ಬಳಿ ಬಸ್ಸಿನಿಂದ ಇಳಿದು ಊಟಕ್ಕಾಗಿ ಸೌಂದರ್ಯ ಹೋಟೆಲ್ ಬಳಿ ಹೋಗುತ್ತಿದ್ದೆವು. ಚಾಸಾ-1 ರವರು ನನಗಿಂತ ಮುಂದೆ ಹೋಗುತ್ತಿದ್ದರು. ಆಗ ಚಾಸಾ-1 ಮತ್ತು ಆರೋಪಿತರ ನಡುವೆ ಏನೋ ಸಂಭಾಷಣೆಯಾಗುತ್ತಿತ್ತು, ನನಗೆ ಸದರಿ ಸಂಭಾಷಣೆ ಕೇಳಿಸಲಿಲ್ಲ. ನಾನು ಅಲ್ಲಿಗೆ ಹೋಗುವಾಗಲೇ ಚಾಸಾ-1 ರವರು ನೆಲಕ್ಕೆ ಬಿದ್ದಿದ್ದರು. ಆ ಸಂದರ್ಭದಲ್ಲಿ ಒಂದು ಬಿಯರ್ ಬಾಟಲಿ ಇತ್ತು. ಆರೋಪಿತರು ಸದರಿ ಬಿಯರ್ ಬಾಟಲಿನಿಂದ ನನ್ನ ಬಲಕೈಗೆ ಹೊಡೆದರು.ಆಗ ಜನರು ಬಂದು ಗಲಾಟೆಯನ್ನು ಬಿಡಿಸಿದರು. ತದನಂತರ ನಾವು ಚಿಕಿತ್ಸೆಗಾಗಿ ಬಾಳೆಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋದೆವು. ತದನಂತರ ಪೊಲೀಸರು ಆಸ್ಪತ್ರೆಗೆ ಆಗಮಿಸಿ ನಮ್ಮ ಹೇಳಿಕೆಯನ್ನು ದಾಖಲು ಮಾಡಿಕೊಂಡರು.

ನಂತರ ದಿನಾಂಕಃ 06.12.2024 ರಂದು ಪೊಲೀಸರು ಕೃತ್ಯ ನಡೆದ ಸ್ಥಳ ಪಂಚನಾಮೆಗಾಗಿ ಸ್ಥಳಕ್ಕೆ ಆಗಮಿಸಿದರು. ಸದರಿ ಸಮಯದಲ್ಲಿ ಚಾಸಾ-2 ಮತ್ತು 3 ರವರು ಪಂಚ ಸಾಕ್ಷಿದಾರರಾಗಿ ಹಾಜರಿದ್ದರು. ನಾನು ಆ ಸಂದರ್ಭದಲ್ಲಿ ಕೃತ್ಯ ನಡೆದ ಸ್ಥಳವನ್ನು ಅವರಿಗೆ ತೋರಿಸಿದೆ. ಅದೇ ಸಂದರ್ಭದಲ್ಲಿ ಪೊಲೀಸರು 3-4 ಭಾವಚಿತ್ರಗಳನ್ನು ತೆಗೆದುಕೊಂಡರು. ಅದೇ

ಸಮಯದಲ್ಲಿ ಕೃತ್ಯಕ್ಕೆ ಬಳಸಿದ ಬಿಯರ್ ಬಾಟಲಿಯನ್ನು ನಾನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪೊಲೀಸರು ಜಪ್ತು ಮಾಡಿಕೊಂಡರು. ತದನಂತರ ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

ಈಗ ಸಾಕ್ಷಿಯು ಸ್ಥಳ ಮತ್ತು ಅಮಾನತು ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2 ಎಂದು ನಿಶಾನೆಗೊಂಡಿರುತ್ತದೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ.

ನಂತರ ದಿನಾಂಕಃ 07.12.2024 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಒಂದು ಒಡೆದ ಬಿಯರ್ ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದೇ ಬಾಟಲಿಯಿಂದ ಘಟನಾ ದಿನದಂದು ನನ್ನ ಮೇಲೆ ಹಲ್ಲೆ ಮಾಡಿರುವುದಾಗಿ ನೋಡಿ ಗುರುತಿಸಿದ್ದು ಅದು ಈಗಾಗಲೇ ಎಂಒ-1 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ಆರೋಪಿತರು ಕೃತ್ಯ ನಡೆದ ದಿನದಂದು ನನಗೆ, ಚಾಸಾ-1 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಅದೇ ದಿನ ಆರೋಪಿತರು ನನಗೆ, ಚಾಸಾ-1 ಮತ್ತು 5 ರವರಿಗೆ ಹಲ್ಲೆ ಮಾಡಿದರು ಎಂದರೆ ಸರಿ.

**ಃಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನ್ಯಾಯಾಲಯದ ಸಮಯವಾದ್ದರಿಂದ ಪಾಟಿ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**